**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**C.C. No. 2583/2023**

**CW- 8** **PW:9**

| | |
|---|---|
| ಸಾಕ್ಷಿಯ ಹೆಸರು | ಃ ಮಕ್ತುಮಸಾಬ ಹಾಸಿಮನವರ |
| ತಂದೆ /ಗಂಡನ ಹೆಸರು | ಃ ಹುಸೇನಸಾಬ |
| ವಯಸ್ಸು | ಃ 72 ವರ್ಷ |
| ಉದ್ಯೋಗ | ಃ ಕೂಲಿ ಕೆಲಸ |
| ವಾಸಸ್ಥಳ | ಃ ಅಮರಗೋಳ, ಹುಬ್ಬಳ್ಳಿ |

ದಿಃ **16.12.2024.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ ಃ**

ಸಾಕ್ಷಿಗೆ ಜಪ್ತಿ ಪಂಚನಾಮೆ ತೋರಿಸಲಾಗಿ ಅದರಲ್ಲಿ ತನ್ನ ಸಹಿ ಗುರುತಿಸಿದ್ದು ಸದರಿ ಪಂಚನಾಮೆಯನ್ನು ನಿಪಿ.19 ಎಂದು, ಸಾಕ್ಷಿಯ ಸಹಿಯನ್ನು ನಿಪಿ.19(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಮಾಡಿದ ದಿನಾಂಕ, ಸಮಯ ಹಾಗೂ ಸ್ಥಳ ಹಾಗೂ ಯಾವ ಕಾರಣಕ್ಕೆ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಗೆ ಮೂರು ಪೊಟೊಗಳನ್ನು ತೋರಿಸಲಾಗಿ ಸಾಕ್ಷಿ ಸದರಿ ಪೊಟೊಗಳಲ್ಲಿ ತಾನು ಇದ್ದೇನೆ ಎಂದು ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.20 ರಿಂದ 22 ಎಂದು ಗುರುತಿಸಲಾಯಿತು. ಆ ದಿನ ಪೊಲಿಸರು ನನ್ನ ಸಮಕ್ಷಮ ಯಾವದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ. ನಿಪಿ.19 ಜರುಗಿಸುವ ಸಮಯದಲ್ಲಿ ನನ್ನ ಜೊತೆ ಮತ್ತು ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದಿರುವ ಆರೋಪಿ ನಂ.2 ನಾನು ಈ ಮುಂಚೆ ನೋಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಎ.ಪಿ.ಪಿ. ಯವರಿಂದಃ**

ದಿಃ 19.08.2022 ರಂದು ಪೊಲಿಸರು ನನ್ನನ್ನು ಹಾಗೂ ಚಾಸಾಃ 9 ರವರನ್ನು ನವನಗರ ಪೊಲಿಸ್ ಠಾಣೆಗೆ ಕರೆದು ಪ್ರಕರಣ ತಿಳಿಸಿ ನಂತರ ಆರೋಪಿ ನಂ.2 ಈತನ ಹೇಳಿದ ಪ್ರಕಾರ ನಮ್ಮನ್ನು ಆತನ ಮನೆಗೆ ಕರೆದುಕೊಂಡು ಹೋಗಿ ನಮ್ಮ ಸಮಕ್ಷಮ ಈಗ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ನಂ.2 ಈತನು ತನ್ನ ಮನೆಯಿಂದ ತಂದು ಹಾಜರುಪಡಿಸಿದ 1) ಇಂಡೊಸ್ಟಾರ್ ಕ್ಯಾಪಿಟಲ್

ಫೈನಾನ್ಸ ಎಂದು ಬರೆದ ತಿಳಿ ನೀಲಿ ಬಣ್ಣದ ಲೆಟರ್ ಹೆಡ್ 2) ಇಂಡೊಸ್ಟಾರ ಕ್ಯಾಪಿಟಲ್ ಪೈನಾನ್ಸ ಎಂದು ಬರೆದಿರುವ ಒಂದು ಕೆಂಪು ಬಣ್ಣದು ರಬ್ಬರ್ ಸೀಲು 3) ಬೂದು ಹಾಗೂ ತಿಳು ಬಣ್ಣದ ಇಂಡೊಸ್ಟಾರ ಕ್ಯಾಪಿಟಲ್ ಫೈನಾನ್ಸ ಲಿಮಿಟೆಡ ಎಂದು ಬರೆದ ರಬ್ಬರ ಸೀಲ ಇಕಿಗಳನ್ನು ಅಮಾನತ್ತುಪಡಿಸಿಕೊಂಡು ನಿಪಿ.19 ರ ಪ್ರಕಾರ  ಮದ್ಯಾಹ್ನ 12.15 ರಿಂದ 13.15 ರವರೆಗೆ ದಿಃ 19.08.2022 ರಂದು ನಿಪಿ.19 ರ ಪ್ರಕಾರ ನನ್ನ ಹಾಗೂ ಚಾಸಾಃ 9 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿರುತ್ತಾರೆ ಹಾಗೂ ನಾನು ಸ್ಥಳದಲ್ಲಿಯೆ ಹಾಜರಿದ್ದು ಸದರಿ ದಾಖಲೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನಿಪಿ.20 ರಿಂದ 22 ಪೊಟೊಗಳನ್ನು ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ನಾನು ಸ್ಥಳದಲ್ಲಿಯೆ ಹಾಜರಿದ್ದು ನಿಪಿ.19 ರಿಂದ 22 ರಲ್ಲಿರುವ ಎಲ್ಲಾ ವಿಷಯ ತಿಳಿದುಕೊಂಡು ನಿಪಿ.19 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.  ಸಾಕ್ಷಿಗೆ ನಿಪಿ.16 ಮತ್ತು ಮು ಮಾ 1 ಮತ್ತು 2 ಗಳನ್ನು ತೋರಿಸಲಾಗಿ ಸಾಕ್ಷಿ ಅವುಗಳನ್ನು ಗುರುತಿಸುವುದಿಲ್ಲ.

**(ಆರೋಪಿ ಪರ ವಕೀಲರು ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ. )**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)
ಓ ಹೇ ಕೆ ಸರಿ ಇದೆ.

Sd/-
**(**ಶ್ರೀಮತಿ ದೀಪಾ  ಜಿ ಮನೇರಕರ**)**
**3** ನೇ ಅಧಿಕ ಹಿ**.**ದಿ**.**ನ್ಯಾ**.**ಹುಬ್ಬಳ್ಳಿ**.**